**ಮೂ.ದಾ.ನಂ. 38/2016**

ಡಿ.ಡಬ್ಲ್ಯು.1

(ಇಂದು ದಿನಾಂಕ: **17–08–2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ಪ್ರಸ್ತುತ ದಾವೆಯಲ್ಲಿ ಯಾವ ಯಾವ ದಾಖಲಾತಿಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಂಚಾಯತ್ ಕಛೇರಿಯಿಂದ ಪಡೆದಂತಹ ಎರಡು ದಾಖಲಾತಿಗಳನ್ನು ಹಾಗೂ ಇನ್ನೂ ಕೆಲವು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಪಂಚಾಯತಿಯಲ್ಲಿ ಕೊಟ್ಟಂತಹ ದಾಖಲಾತಿಗಳನ್ನು ನಾನೇ ಅರ್ಜಿಯನ್ನು ನೀಡಿ ಪಡೆದಿರುತ್ತೇನೆ. ಪಂಚಾಯತಿಯವರು ನೀಡಿದಂತಹ ದಾಖಲಾತಿಗಳು ಯಾವುದು ಎಂದರೆ ಸಾಕ್ಷಿಯು ಸರ್ವೆ ನಂಬರಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪಂಚಾಯತದವರು ನೀಡಿದಂತಹ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಡಿ 8 ರ ಅರ್ಜಿಯನ್ನು ಗ್ರಾಮ ಪಂಚಾಯತ ಕಾರ್ಯಾಲಯ, ಮಿರ್ಜಾನ ಕ್ಕೆ ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಶ್ರೀ. ಆರ್.ಜಿ.ನಾಯ್ಕ, ವಕೀಲರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಶ್ರೀ. ಆರ್.ಜಿ.ನಾಯ್ಕ, ವಕೀಲರ ಕಛೇರಿಗೆ ಈ ರೀತಿಯ ಅರ್ಜಿಯನ್ನು ಕೊಡಲು ನಾನು ಹೋಗಿರುವುದಿಲ್ಲ. ಸದ್ರಿ ಅರ್ಜಿಯನ್ನು ಬರೆಯಲು ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ. ನಿಡಿ8 ರಂತೆ ಅರ್ಜಿಯನ್ನು ನೀಡುವಂತೆ ಶ್ರೀ. ಆರ್.ಜಿ.ನಾಯ್ಕ, ವಕೀಲರ ಕಛೇರಿಗೆ ಹೋಗಿದ್ದೀರಾ ಎಂದರೆ ಸಾಕ್ಷಿಯು ಸರಿಯಾಗಿ ನೆನಪು ಇರುವುದಿಲ್ಲ ಎಂದು

ನುಡಿಯುತ್ತಾರೆ. ನಿಡಿ8 ರ ಅರ್ಜಿಯನ್ನು ಗ್ರಾಮ ಪಂಚಾಯತ ಕಾರ್ಯಾಲಯ, ಮಿರ್ಜಾನ ಕ್ಕೆ ಯಾರು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ನಿಡಿ9 ರ ದಾಖಲಾತಿಯನ್ನು ತರಲು ಗ್ರಾಮ ಪಂಚಾಯತ ಕಾರ್ಯಾಲಯ, ಮಿರ್ಜಾನ ಕ್ಕೆ ಯಾರು ಹೋಗಿ ತೆಗೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ8 ಹಾಗೂ ನಿಡಿ9 ಸದ್ರಿ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಯಾರು ಹಾಜರು ಮಾಡಲು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನಡಿಯುತ್ತಾರೆ. ನಿಡಿ8 ಹಾಗೂ ನಿಡಿ9 ಸದ್ರಿ ದಾಖಲಾತಿಗನ್ನು ಯಾರು ತಂದು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನಿಡಿ8 ಹಾಗೂ ನಿಡಿ9 ಯಾವ ಕಾರಣಕ್ಕಾಗಿ ಹಾಜರು ಮಾಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ರಾಮಾ ಸುಬ್ರಾಯ ನಾಯ್ಕ ಇವರ ಹೆಸರಿಗೆ ಆಸ್ತಿ ಇರುತ್ತದೆ ಎನ್ನುವ ಕುರಿತು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಡಿ1 ಯಾವ ದಾಖಲಾತಿ ಎಂದು ಹೇಳಲು ಬರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ1 ರಿಂದ 7 ಸದ್ರಿ ದಾಖಲಾತಿಗಳನ್ನು ಯಾರು ತೆಗೆಸಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಅರ್ಜಿಯನ್ನು ಕೊಟ್ಟು ತೆಗೆಸಿ ಕೊಟ್ಟಿರುವುದಾಗಿ ನುಡಿಯುತ್ತಾರೆ. ನಿಡಿ1 ರಿಂದ 7 ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಡಿ1 ರಿಂದ 7 ಸದ್ರಿ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಯಾರು ಹಾಜರುಪಡಿಸಲು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಶ್ರೀನಿವಾಸ, ವಕೀಲರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಪ್ರಕರಣ ರಾಮಾ ಸುಬ್ರಾಯ ನಾಯ್ಕ ರವರು ಕುಮಟಾ

ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ ಎಂದು ಯಾರು ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ರಾಮಾ ಸುಬ್ರಾಯ ನಾಯ್ಕ ರವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ರಾಮಾ ಸುಬ್ರಾಯ ನಾಯ್ಕ ಪ್ರಕರಣ ದಾಖಲು ಮಾಡಿದ ಬಗ್ಗೆ ಯಾವ ಸಾಲಿನಲ್ಲಿ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿಯ ಪ್ರಕರಣ ದಾಖಲಾದ ನಂತರ ರಾಮಾ ಸುಬ್ರಾಯ ನಾಯ್ಕ ರವರ ಹತ್ತಿರ ಯಾರು ಹೋಗಿ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ರಾಮಾ ಸುಬ್ರಾಯ ನಾಯ್ಕ ರವರು ನಮ್ಮ ಮನೆಯಲ್ಲೇ ವಾಸ್ತವ್ಯ ಇದ್ದರು ಎಂದು ನುಡಿಯುತ್ತಾರೆ. ರಾಮಾ ಸುಬ್ರಾಯ ನಾಯ್ಕ ರವರು ಯಾವ ಸಾಲಿನಿಂದ ಮನೆಯಲ್ಲಿ ವಾಸ್ತವ್ಯ ಇದ್ದರು ಎಂದರೆ ಸಾಕ್ಷಿಯು ಅವರು ತೀರಿಹೋಗುವ 10 ವರ್ಷಗಳ ಹಿಂದಿನಿಂದ ವಾಸ್ತವ್ಯ ಇದ್ದು ಯಾವ ವರ್ಷದಿಂದ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಪ್ರಕರಣ ದಾಖಲು ಮಾಡುವ ಸಮಯದಲ್ಲಿ ರಾಮಾ ಸುಬ್ರಾಯ ನಾಯ್ಕ ರವರು ಮನೆಯಲ್ಲಿ ವಾಸ್ತವ್ಯ ಇದ್ದರು ಎಂದರೆ ಸಾಕ್ಷಿಯು ರಾಮಾ ಸುಬ್ರಾಯ ನಾಯ್ಕ ನಮ್ಮ ಮನೆಗೆ ಬರುವ ಪೂರ್ವದಲ್ಲಿ ಪ್ರಕರಣ ದಾಖಲು ಮಾಡಿರುವುದಾಗಿ ನುಡಿಯುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ